ಕ್ರ. ಸಂ.	ಆರ್‌ಐಡಿಎಫ್ ಯೋಜನೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ
1	14	ಶಿವಮೊಗ್ಗ–ಹೊಸಕೋಟೆ ರಸ್ತೆಯ ಬುಳ್ಳಾಪುರದಿಂದ ಹರಿಜನ ಕಾಲೋನಿ ಮಾರ್ಗ ಕ್ಯಾತನಕೊಪ್ಪ ಸೇರುವ ರಸ್ತೆ (ಹಂತ–1)	100.00
2	14	ಕಾಚಿನಕಟ್ಟೆ–ಯರಗನಾಳು ಗ್ರಾಮಗಳ ನಡುವೆ ಹಳ್ಳಕ್ಕೆ ಸೇತುವೆ ನಿರ್ಮಾಣ	45.00
3	14	ಕೂಡಿಗೆರೆ–ಕಮ್ಮರಘಟ್ಟ ರಸ್ತೆಯಿಂದ ರಾಷ್ಟ್ರೀಯ ಹೆದ್ದರಿ–13ನ್ನು ತಟ್ಟೆಹಳ್ಳಿ, ಡಿಬಿ ಹಳ್ಳಿ ಮಾರ್ಗ ಸೇರುವ ರಸ್ತೆ ಅಭಿವೃದ್ಧಿ (ಹಂತ–1)	44.00
4	15	ಆಯನೂರು–,ಆಲೂರು ರಸ್ತೆಯಿಂದ ಮಲ್ಲೇಶಂಕರ ದೇವಸ್ಥಾನಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ	65.00
5	15	ಕಲ್ಲಜ್ಜನಹಳ್ಳಿ–ಹನುಮಂತಾಪುರ ರಸ್ತೆ ಅಭಿವೃದ್ಧಿ	57.00

ಬಂದರು ಅಭಿವೃದ್ಧಿ ಪಡಿಸುವುದು

1010 (624) ಶ್ರೀ ಲಾಲಾಜಿ. ಆರ್. ಮೆಂಡನ್ (ಕಾಪು) : ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ವಿಧಾನಸಭೆ ಕ್ಷೇತ್ರದ ಹೆಜಮಾಡಿ ಮೀನುಗಾರಿಕೆ ಬಂದರು ಅಭಿವೃದ್ಧಿಯ ಬಗೆಗಿನ ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ;

ಆ) ಈ ಮೊದಲು ಹೆಜಮಾಡಿಗೆ ಹೂಳೆತ್ತುವ ಸಲುವಾಗಿ ಮಂಜೂರಾಗಿರುವ ಹಾಗೂ ಬಿಡುಗಡೆಯಾಗಿರುವ 2 ಕೋಟಿ ರೂಪಾಯಿಗಳ

ಕಾಮಗಾರಿ ಕಾರ್ಯಗತಗೊಳ್ಳದಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಮಂಗಳೂರು ಮತ್ತು ಮಲ್ಪೆ ಮಧ್ಯೆ ಬಂದರು ಇಲ್ಲದಿರುವು ದರಿಂದ ಹೆಜಮಾಡಿಗೆ ಬಂದರು ನಿರ್ಮಾಣ ಮಾಡುವ ಅವಶ್ಯಕತೆಯಿರುವ ಕಾರಣ ಕೇಂದ್ರ ಮತ್ತು ರಾಜ್ಯ ಜಂಟಿ ಸಹಯೋಗದೊಂದಿಗೆ ಬಂದರು ನಿರ್ಮಾಣ ಮಾಡಲಾಗುವುದೇ?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :

ಅ) ಕಾಪು ವಿಧಾನಸಭೆ ಕ್ಷೇತ್ರದ ಹೆಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರದ 2ನೇ ಹಂತದ ಅಭಿವೃದ್ಧಿ ಬಗ್ಗೆ ರೂ.45.00 ಕೋಟಿ ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಪಟ್ಟಿಯ ತಾಂತ್ರಿಕ ಹಾಗೂ ಆರ್ಥಿಕ ಲಾಭದಾಯಕತ್ವದ (Techno-Economic Feasibility) ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕೋಸ್ಟಲ್ ಇಂಜಿನಿಯರಿಂಗ್ ಆಫ್ ಫಿಷರಿ, ಬೆಂಗಳೂರು, ಇವರಿಗೆ ಕಳುಹಿಸಿಕೊಡಲಾಗಿದೆ.

ಆ) ಈ ಮೊದಲು ಹೆಜಮಾಡಿ ಕೋಡಿಯಲ್ಲಿ ಹೂಳೆತ್ತುವ ಕಾಮಗಾರಿಗೆ ರೂ.2.00 ಕೋಟಿ ಅನುದಾನ ಮಂಜೂರಾಗಿದ್ದರೂ ಗೈಡ್‌ಬಂಡ್/ಬ್ರೇಕ್ ವಾಟರ್ ನಿರ್ಮಿಸದೆ ಹೂಳೆತ್ತುವುದು ತಾಂತ್ರಿಕವಾಗಿ ಸೂಕ್ತವಲ್ಲವೆಂದು ಕೇಂದ್ರ ಜಲ ಮತ್ತು ವಿದ್ಯುತ್ ಸಂಶೋಧನಾ ಸಂಸ್ಥೆ (CWPRS), ಪುಣೆ ಇವರು ನೀಡಿದ ವರದಿಯ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ಕೈಬಿಡಲಾಗಿರುತ್ತದೆ. ಅನಂತರ ಹೆಜಮಾಡಿ ಮೀನುಗಾರಿಕೆ ಇಳಿದಾಣ ಕೇಂದ್ರದ 2ನೇ ಹಂತದ ಅಭಿವೃದ್ಧಿ ಬಗ್ಗೆ ರೂ. 45.00 ಕೋಟಿ ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು ಅಂದಾಜು ಪಟ್ಟಿಯ ತಾಂತ್ರಿಕ ಹಾಗೂ ಆರ್ಥಿಕ ಲಾಭದಾಯಕತ್ವದ (Techno-Economic Feasibility) ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವಂತೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್‌ಕೋಸ್ಟಲ್ ಇಂಜಿನಿಯರಿಂಗ್ ಆಫ್‌ಫಿಷರಿ, ಬೆಂಗಳೂರು ಇವರಿಗೆ ಕಳುಹಿಸಿಕೊಡಲಾಗಿದೆ.

ಇ) ಮಂಗಳೂರು ಮತ್ತು ಮಲ್ಪೆ ನಡುವೆ ಸೂಕ್ತ ಬಂದರು ಇಲ್ಲದಿರುವುದರಿಂದ ಹೆಜಮಾಡಿಯಲ್ಲಿ ಆರ್ಥಿಕ ಮತ್ತು ತಾಂತ್ರಿಕವಾಗಿ ಲಾಭದಾಯಕವಾಗುವಂತಿದ್ದಲ್ಲಿ ಮಾತ್ರ ರೂ.45.00 ಕೋಟಿ ವೆಚ್ಚದಲ್ಲಿ 2ನೇ ಹಂತದ ಅಭಿವೃದ್ಧಿ ಯೋಜನೆ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಸೂಕ್ತ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗುವುದು.

ಸಮುದ್ರದ ಕೊರೆತಕ್ಕೆ ಹಣ ಮಂಜೂರಾದ

1011 (625) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿನ ಸಮುದ್ರ ಕೊರೆತಕ್ಕೆ ಮಂಜೂರು ಮಾಡಿದ ಹಣವೆಷ್ಟು?

ಆ) ಇದರಲ್ಲಿ ಕಾಪು ಕ್ಷೇತ್ರಕ್ಕೆ ಬಳಸಲಾದ ಹಣ ಎಷ್ಟು?

ಇ) ಕೇಂದ್ರದಿಂದ ರಾಜ್ಯಕ್ಕೆ ಕಡಲು ಕೊರೆತದ ಸಲುವಾಗಿ ಮಂಜೂರಾದ ಹಣವೆಷ್ಟು?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು) :

ಅ) ಉಡುಪಿ ಜಿಲ್ಲೆಯಲ್ಲಿನ ಸಮುದ್ರ ಕೊರೆತಕ್ಕೆ 2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶಿರ್ಷಿಕೆ 4711 ರಡಿಯಲ್ಲಿ ರೂ. 164.06 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ ಹಾಗೂ ಪ್ರಾಕೃತಿಕ ವಿಕೋಪ ನಿಧಿಯಡಿ ಉಡುಪಿ ಜಿಲ್ಲಾಧಿಕಾರಿಗಳಿಂದ ರೂ. 108.80 ಲಕ್ಷಗಳನ್ನು ಒದಗಿಸಲಾಗಿರುತ್ತದೆ.

ಆ) ಕಾಪು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತೆಂಕ ಎರ್ಮಾಳ್, ಉದ್ಯಾವರ ಪಡುಕೆರೆ, ಬಡಾ ಎರ್ಮಾಳ್ ಹಾಗೂ ಉಚ್ಚಿಲ ಕರಾವಳಿ ತೀರ ಪ್ರದೇಶಗಳಿಗೆ 2009–10ನೇ ಸಾಲಿನ ಮಳೆಗಾಲದಲ್ಲಿ ಸಂಭವಿಸಿದ ಸಮುದ್ರ ಕೊರೆತವನ್ನು ತಡೆಯಲು ತುರ್ತು ಕಾಮಗಾರಿ ಕೈಗೊಳ್ಳುವುದಕ್ಕೋಸ್ಕರ ರೂ. 108.80 ಲಕ್ಷಗಳ ಮೊತ್ತದ ಕಾಮಗಾರಿಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಇವರು ಪ್ರಾಕೃತಿಕ ವಿಕೋಪ ನಿಧಿಯಡಿ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಿರುತ್ತಾರೆ.